## ಸಾಧಕಿಯರೂ ದೌರ್ಬಲ್ಯಗಳಿಗೆ ಹೊರತಲ್ಲ

ಸಾಧಕಿಯರು ಕೂಡ ಸಾಮಾನ್ಯ ಮಹಿಳೆಯರಂತೆ ಸತತ ಭರವಸೆ ಮತ್ತು ಉತ್ತೇಜನಗಳನ್ನು ನಿರೀಕ್ಷಿಸುತ್ತಾರೆ. ಸಂಸಾರ, ಮನೆ ಮತ್ತು ಮಕ್ಕಳ ಬಹುತೇಕ ಜವಾಬ್ದಾರಿಯನ್ನು ಇತರರಂತೆಯೇ ನಿಭಾಯಿಸದ ತಾನು ತಪ್ಪಿತಸ್ಥೆ ಎಂದು ಭಾವಿಸಿಕೊಂಡು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಎಲ್ಲವನ್ನೂ ಚಾಚೂ ತಪ್ಪದಂತೆ ನಿಖರವಾಗಿ ಮಾಡುತ್ತೇನೆಂಬ ಹಟವೂ ಸಲ್ಲದು. ಏಕೆಂದರೆ ಯಶಸ್ಸು ಎನ್ನುವುದು ಒಂದು ಪ್ರಯಾಣ ಅಷ್ಟೇ. ಆದರೆ, ಅದೇ ಗಮ್ಯವಾಗದಂತೆ ಎಚ್ಚರ ವಹಿಸಬೇಕು.

ನಂಬಿದವರಿಂದ ಭರವಸೆ, ಸಹಾಯ, ಸಹಕಾರ, ಪ್ರೀತಿ, ಆದರ ಮತ್ತು ಗೌರವ ಸಿಗದಿದ್ದಲ್ಲಿ ಸಾಧಕಿಯರು ತಮ್ಮದೇ ಸ್ವಭಾವದ ಜನರನ್ನು ಹುಡುಕಿಕೊಳ್ಳಬೇಕಾಗುತ್ತದೆ. ತಮ್ಮದೇ ಆದ ನೆಟ್‌ವರ್ಕ್ ಬೆಳಸಿಕೊಳ್ಳಬೇಕಾಗುತ್ತದೆ. ನಂಬಬಲ್ಲ ಹಳೆಯ ಸ್ನೇಹಿತರನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗುತ್ತದೆ. ಸಾಧನೆಯ ಜೊತೆಗೆ ತಾವು ಒಂಟಿಯಾಗದಂತೆ ಪ್ರಯತ್ನ ಪಡಬೇಕಾದ ಜವಾಬ್ದಾರಿ ಅವರ ಮೇಲೂ ಇದೆ. ಒಂದು ಸಾಧನೆಯ ನಂತರ ಮುಂದಿನ ಹಂತದ ಸಾಧನೆಯ ಬಗ್ಗೆ ಮನಸ್ಸು ತುಡಿದರೂ ಪ್ರತಿ ಹಂತದಲ್ಲಿಯೂ ಒಂಟಿಯಾಗದಂತೆ ಆಕೆ ಎಚ್ಚರಿಕೆ ವಹಿಸಬೇಕಾಗುತ್ತದೆ.

ಒಂದೇ ಸಮನೆ ಸಾಧನೆಗಳಲ್ಲಿ ತೊಡಗಿಕೊಳ್ಳುವುದು ಆರೋಗ್ಯಕ್ಕೆ ಅಪಾಯಕಾರಿ. ಕೆಲಸದ ನಡುವೆ ಒಂದಿಷ್ಟು ಹವ್ಯಾಸ, ಸ್ನೇಹಿತರೊಂದಿಗಿನ ನಗು–ಒಡನಾಟಗಳು ಸಾಧನೆಯ ಕಡೆಗೆ ಶಕ್ತಿಯನ್ನು ವರ್ಧಿಸಬಲ್ಲವು, ಒಂಟಿತನವನ್ನು ನೀಗಿ ಗುರಿಯನ್ನು ಮುಟ್ಟಲು ಸಹಕಾರಿಯಾಗಬಲ್ಲವು. ಅದರ ಜೊತೆಗೆ ಯಾವುದು ಮುಖ್ಯವೋ ಅದರ ಕಡೆಗೆ ಮಾತ್ರ ಗಮನಹರಿಸಿ ಮಿಕ್ಕ ವಿಚಾರಗಳನ್ನು ನಿರ್ಲಕ್ಷಿಸುವುದು ಅತ್ಯಂತ ಮುಖ್ಯ. ಇಲ್ಲದಿದ್ದರೆ ಸಾಧನೆಯ ಮೂಲಕ ಸಿಗುವ ಸುಖಕ್ಕೆ ಬೆಲೆಯಿಲ್ಲದ ಪರಿಸ್ಥಿತಿ ನಿರ್ಮಾಣವಾಗಬಲ್ಲದು.

ಒಪೆರಾ ಹಂಫ್ರಿ, ರಿಚರ್ಡ್ ಬ್ರಾನ್ಸನ್, ಬಿಲ್ ಗೇಟ್ಸ್‌ನಂತಹ ಬಿಲಿಯನೇರ್ ಯಶಸ್ವಿ ಉದ್ಯಮಿಗಳು ಕೂಡ ಒಂಟಿತನದಿಂದ ಹೊರಬರುವ ಅಗತ್ಯವನ್ನು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ, ಒಂಟಿತನದ ಭಯದಲ್ಲಿ ಯಶಸ್ಸಿನ ಹಾದಿಯ ಬಗ್ಗೆ ಭಯವೂ ಸಲ್ಲ. ಎತ್ತರವನ್ನು ಏರಿಯಾದ ಮೇಲೆ ಅಲ್ಲಿನ ಉತ್ತುಂಗದಿಂದ ಸಿಗುವ ನೋಟವನ್ನು ಸಂಪೂರ್ಣ ಆನಂದಿಸಲು ಆರೋಗ್ಯಕರ ಮನಸ್ಥಿತಿಯನ್ನು ಉಳಿಸಿಕೊಳ್ಳಬೇಕು.

ಮತ್ತೊಂದು ವಿಧಾನವೆಂದರೆ, ನಿಮ್ಮಂತೆ ಯಶಸ್ಸನ್ನು ಗಳಿಸಬೇಕೆಂಬ ಹಂಬಲದಿಂದ ನಿಮ್ಮ ಬೆನ್ನು ಬಿದ್ದವರಿಗೆ ಮಾರ್ಗದರ್ಶಿಗಳಾಗಿ ಅವರ ಸಖ್ಯವನ್ನು ಗಳಿಸಿಕೊಳ್ಳಬೇಕು.

ಗಂಡಸಿನ ಬಯಕೆ ಅವನನ್ನು ಅರಣ್ಯನೀತಿಯ ಲೆಕ್ಕಕ್ಕೆ ಪಶುವನ್ನಾಗಿಸುತ್ತದೆ. ಹಾಗಾಗಿ ಸಾಧಕಿಯರು ಇಂದಿಗೂ ತೀವ್ರವಾದ ಈರ್ಷ್ಯೆಯ ವರ್ತನೆಗಳನ್ನು ಗಂಡಸರಿಂದ ಮತ್ತು ಪುರುಷಪ್ರಧಾನವಾದ ಸಮಾಜದಿಂದ ಎದುರಿಸುತ್ತಿದ್ದಾರೆ.

ಮತ್ತೊಬ್ಬ ಪುರುಷ ಸರಿ ಸಮಾನವಾದ ಹುದ್ದೆಗೆ ಏರಿದರೆ ಸಂಧಾನ ಮಾಡಿಕೊಂಡು, ಅವನೊಡನೆ ಪಾರ್ಟಿಗೆ ಹೋಗುವ ಇದೇ ಪುರುಷರು, ಹೆಣ್ಣು ಸರಿಸಮನಾದ ಕೂಡಲೇ ಅವಳಿಗೆ ಸವಾಲು ಹಾಕಲು ಮುನ್ನುಗ್ಗಿ ಅವಳು ಹೆಜ್ಜೆಗಳನ್ನು ಹಿಂತೆಗೆದುಕೊಳ್ಳಲು ಕಾರಣರಾಗಿದ್ದಾರೆ. ಅದೆಷ್ಟೋ ಸಬಲ ಹೆಣ್ಣು ಮಕ್ಕಳು ಇದರಿಂದ ಬೆದರಿ ಯಶಸ್ಸಿನ ಮೆಟ್ಟಿಲುಗಳನ್ನು ಏರಲು ಅಂಜಿ ಹಿಮ್ಮೆಟ್ಟಿದ್ದಾರೆ. ಅವಕಾಶ ವಂಚಿತರಾಗಿದ್ದಾರೆ. ಈ ನಡುವೆ ಬೆಳಕಿಗೆ ಬಾರದೇ ಹೋದ ಸಾಧಕಿಯರು ಅದೆಷ್ಟೋ ಇರಬಹುದು.

### ಶಕ್ತ-ಯಶಸ್ವಿ ಮಹಿಳೆ ಯಾರು?

ವಿಜ್ಞಾನವನ್ನು ಬಲ್ಲ ಎಲ್ಲರಿಗೂ ಪುರುಷ ಮತ್ತು ಸ್ತ್ರೀಯರ ದೈಹಿಕ ಬಲದಲ್ಲಿನ ವ್ಯತ್ಯಾಸದ ಬಗ್ಗೆ ಅರಿವಿದೆ. ಸಾಮಾನ್ಯವಾಗಿ ಪುರುಷರಿಗಿಂತ ಪುಟ್ಟ ಅಸ್ಥಿಹಂದರ, ಸ್ನಾಯುಗಳು, ಪುಪ್ಪುಸ, ಹೃದಯ ಮತ್ತಿತರ ಅಂಗಾಂಗಗಳನ್ನು ಹೊಂದಿರುವ ಮಹಿಳೆ ಶಾರೀರಿಕವಾಗಿ ಪುರುಷನಷ್ಟು ಶಕ್ತಿಯನ್ನು ಹೊಂದಿರುವುದಿಲ್ಲ. ಆದರೆ, ಸಂತಾನೋತ್ಪತ್ತಿಗೆ ಬೇಕಾದ ವಿಶೇಷ ಅಂಗಾಂಗಗಳೊಂದಿಗೆ ಮನುಷ್ಯಕುಲದ ಉಳಿವಿಗೆ ಮಹಿಳೆ ಅತ್ಯಗತ್ಯ. ಅದನ್ನು ನಿರ್ವಹಿಸುತ್ತಲೇ, ಸಾಧಾರಣ ಶಕ್ತಿಯೊಂದಿಗೆ ಮಾಡಬಹುದಾದ ಎಲ್ಲ ಕೆಲಸಗಳಿಗೂ ಕೈ ಜೋಡಿಸುತ್ತಲೇ ಮಹಿಳೆ ವಿಕಸಿತಳಾಗಿದ್ದಾಳೆ. ಸಂಸಾರ ಬೇಡುವ ನೂರಾರು ನಿರೀಕ್ಷೆಗಳನ್ನು ಸರಿದೂಗಿಸುತ್ತಲೇ ಮೆದುಳನ್ನು ಹರಿತಗೊಳಿಸಿಕೊಂಡಿದ್ದಾಳೆ. ಸಮಾಜ ಒಡ್ಡಿದ ಸವಾಲುಗಳನ್ನು ಸ್ವೀಕರಿಸಿ ಬೆಂಕಿಯಲ್ಲಿ ಅರಳಿದ ಹೂವಾಗಿ ಅಪಾರ ಸಹನೆ, ಕರುಣೆ ಮತ್ತು ತಾಳ್ಮೆಯನ್ನು ಮೈಗೂಡಿಸಿಕೊಂಡಿದ್ದಾಳೆ. ಅವಳಿಗೆ ಸುಖಗಳು ದೊರಕಬಾರದು ಎಂಬ ದುರುದ್ದೇಶಗಳಿಂದ ದೂರವಿಟ್ಟ ಕಾರಣ ದುಶ್ಚಟಗಳಿಂದಲೂ ಅವಳು ಬಹುತೇಕ ಪಾರಾಗಿದ್ದಾಳೆ.

ಇಂದಿನ ಅಧ್ಯಯನಗಳ ಪ್ರಕಾರ ಹೃದಯ, ಶ್ವಾಸಕೋಶಗಳ ಕಾಯಿಲೆಗಳಲ್ಲಿ ಪುರುಷರದ್ದೇ ಮೇಲುಗೈ. ಪುರುಷ ಮತ್ತು ಮಹಿಳೆ ಇಬ್ಬರಲ್ಲೂ ಇರಬಹುದಾದ ಧೈರ್ಯ, ತ್ಯಾಗ, ಕರುಣೆ, ಮಹಾತ್ವಾಕಾಂಕ್ಷೆಗಳಲ್ಲಿ ಅವಳು ಯಾವುದರಲ್ಲೂ ಹಿಂದುಳಿದಿಲ್ಲ. ಧೂಳೀಪಟವಾಗಬಹುದಿದ್ದ ಅದೆಷ್ಟೋ ಸಂಸಾರಗಳು ಮಾತೃಪ್ರಧಾನವಾಗಿಯೇ ಜೀವ ಉಳಿಸಿಕೊಂಡು ನಿರ್ವಹಣೆಯಾಗುತ್ತಿವೆ. ತಮಗೆ ಸಲ್ಲಬೇಕಾದ ಯಾವ ಪ್ರಶಂಸೆ, ಮೆಚ್ಚುಗೆ ಮತ್ತು ಮಾನ್ಯತೆಗಳಿಲ್ಲದೆಯೂ ಮಹಿಳೆಯರು ಕುಟುಂಬಗಳನ್ನು, ಸಮಾಜಗಳನ್ನು, ಉದ್ಯಮಗಳನ್ನು, ದೇಶವನ್ನು ಪುರುಷನಷ್ಟೇ ಶಕ್ತರಾಗಿ ಮುನ್ನಡೆಸುತ್ತಿದ್ದಾರೆ. ಪುರುಷ ಮತ್ತು ಸ್ತ್ರೀಯರಿಬ್ಬರೂ ಸಮನಾಗಿ ದುಡಿವ ಮತ್ತು ಕೊಡುಗೆಗಳಿರುವ ದೇಶಗಳಲ್ಲಿ ಅಭಿವೃದ್ಧಿ ಮತ್ತು ಮಾನವೀಯತೆಗಳನ್ನು ಹೆಚ್ಚು ಕಾಣುತ್ತೇವೆ.

ಅದನ್ನು ಇಂದಿನ ಸಮಾಜ ಅಲ್ಲಗಳೆಯುವುದಿಲ್ಲವಾದರೂ ದಿಟ್ಟ, ಶಕ್ತ, ಸಾಧಕಿಯನ್ನು ಒಂಟಿಯಾಗಿಸುವಲ್ಲಿ ಎಲ್ಲರೂ ಕೈ ಜೋಡಿಸುವುದು ಯಾವ ಕಾರಣಕ್ಕೆ?

### ಸಶಕ್ತ ಮಹಿಳೆ ಅನಾಕರ್ಷಕವೇ?

ನಾವು ತೊಡುವ ಚಶ್ಮಾದ ಪ್ರಕಾರ ನಮಗೆ ಈ ಪ್ರಪಂಚ ಕಾಣಿಸುತ್ತದೆ. ಅಂತೆಯೇ ನಮ್ಮ ತಲೆಯಲ್ಲಿ ಇಲ್ಲದಿರುವುದು ಎದುರಿಗಿದ್ದರೂ ಕಾಣಿಸುವುದಿಲ್ಲ.

ಆಕರ್ಷಕವಾಗಿದ್ದು, ತನ್ನ ಸ್ವಂತ ಬುದ್ಧಿ, ಶಕ್ತಿ, ಶ್ರಮ ಮತ್ತು ಅವಿರತ ಸಾಧನೆಗಳ ಮೂಲಕ ಅಪಾರ ಹಣ ಗಳಿಸಿ ಮೇಲೇರುವ ಒಬ್ಬ ಗಂಡಸನ್ನು ಓಲೈಸುವ ಸಮಾಜ ಅದನ್ನೇ ಮಾಡಿದ ಮಹಿಳೆಯಿಂದ ದೂರ ಸರಿಯುತ್ತದೆ. ಕನಿಷ್ಠ ಅವಳಿಗೆ ಒಬ್ಬ ಸಾಧಾರಣ ರೂಪಿನ, ತಿಳಿವಳಿಕೆಯಿಲ್ಲದ ಮಹಿಳೆಗೆ ಸಿಗಬಹುದಾದ ಗಮನವೂ ಗಂಡಸರಿಂದ ಸಿಗದಾಗುತ್ತದೆ. ಇನ್ನೂ ಕೆಲವು ಕಾರಣಗಳಿವೆ.

ಅವಳ ಬುದ್ಧಿಮತ್ತೆ ಮತ್ತು ಲೋಕಾನುಭವದ ಕಾರಣ ಅವಳ ಮುಖದಲ್ಲಿನ ಮುಗ್ಧತೆ ಇಲ್ಲವಾಗಬಹುದು. ಅವಳು ಅಳವಡಿಸಿಕೊಳ್ಳುವ ದಿನಚರಿಯ ಕಾರಣ ಅವಳ ಉಡುಪುಗಳು ಉದ್ರೇಕಕಾರಿಯಲ್ಲದಿರಬಹುದು. ಮೇಲ್ನೋಟಕ್ಕೆ ಅವಳು ವ್ಯಾಪಾರೀ ಮನೋಭಾವದವಳಂತೆ ತೋರಬಹುದು.

ಐಸ್ ಕ್ರೀಂ, ಪಾನೀಪುರಿಗಳ ಆಕರ್ಷಣೆಗೆ ಅವಳು ಬೀಳದಿರಬಹುದು. ಪ್ರಪಂಚವನ್ನು ಕನಸುಗಣ್ಣುಗಳಿಂದ ನೋಡದೆ ಇರುವಂತೆ ಕಾಣುವ ಸಮಚಿತ್ತವನ್ನು ಹೊಂದಿದ್ದು ಶಾಂತಚಿತ್ತಳಾಗಿ ಪ್ರಬುದ್ಧವಾಗಿ ಕಾಣಬಹುದು. ಅವಳು ಸುಲಭವಾಗಿ ಇತರರನ್ನು ಅಪಾದಮಸ್ತಕ ಹೊಗಳದಿರಬಹುದು. ಪ್ರಪಂಚ ಸುತ್ತಿದ ಕಾರಣ ಅವಳ ಕಣ್ಣುಗಳಲ್ಲಿರಬಹುದಾದ ಕಾಂತಿಯಲ್ಲಿ ಜನರಿಗೆ ತಾವು ನಿಸ್ತೇಜರಾದಂತಹ ಅನುಭವ ಉಂಟಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಅವಳ ಎದುರು ತಾವು ನಗೆಪಾಟಲಾದರೆ, ಅವಳಿಗೆ ತಮ್ಮ ಆಟಗಳು ತಿಳಿದರೆ ಎಂಬ ಕೀಳರಿಮೆ ಅತಿಹೆಚ್ಚು ಜನ ಗಂಡಸರನ್ನು ಕಾಡಬಹುದು. ಆ ಕ್ಷಣ ಅವರು ಇಂತಹ ಹೆಂಗಸರನ್ನು 'ಏ ಆಯಮ್ಮ ಬಿಡ್ರೀ...' ಎನ್ನುವ ಬೇರೆ ಅರ್ಥ ಬರುವ ಮಾತುಗಳಿಂದ ಮುಳುಗಿಸಲು ನೋಡುತ್ತಾರೆ.

ಬಹುತೇಕ ಪುರುಷರಿಗೆ ಮಹಿಳೆಯರು ಆಕರ್ಷಕರಾಗಿ ಕಾಣಬೇಕೆಂದರೆ ಅವರಿಂದ ಪುರುಷರು ಪ್ರಚೋದಿತರಾಗಬೇಕು. ಅವಳ ಎದುರಿಗೆ ಅವರು ಸ್ವತಃ ಬಲಿಷ್ಠ